**ಸಾಕ್ಷಿಯನ್ನು ದಿಃ 07.04.2026 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ಶ್ರೀ ಸಿ.ಎಸ್.ಎಸ್ ವಕೀಲರಿಂದಃ-**

ನಾನು ವ್ಯವಸಾಯ ಮಾಡಿಕೊಂಡಿದ್ದೇನೆ. ನನ್ನ ಜಮೀನು ಗುರುಪುರದಲ್ಲಿ ಇದೆ, ಅದರ ಸರ್ವೆ ನಂಬರ್ ಗೊತ್ತಿಲ್ಲ. ನಮ್ಮ ಜಮೀನಿನ ಚಕ್ಕುಬಂದಿ ನನಗೆ ಹೇಳಲು ಗೊತ್ತಾಗುವುದಿಲ್ಲ. ಈ ಕೇಸಿನ ವಾದಿ ಮತ್ತು ಪ್ರತಿವಾದಿ ಎಂದರೆ ಏನು ಎಂದು ನನಗೆ ಗೊತ್ತಿಲ್ಲ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ಈ ಕೇಸ್ ನ ದಾವಾ ಸ್ವತ್ತು ಎಂದರೆ ಯಾವುದು ಎಂದು ನನಗೆ ಗೊತ್ತಿಲ್ಲ. ನಾನು 40-50 ವರ್ಷಗಳಿಂದ ಚಿಕ್ಕಹುಣಸೂರಿನಲ್ಲಿ ವಾಸ ಇದ್ದೇನೆ. ಜ್ಞಾನದೇವ ರವರು ಗೊತ್ತು, ಆದರೆ ಅವರ ತಂದೆ - ತಾಯಿ ಹೆಸರು ಗೊತ್ತಿಲ್ಲ. ಅವರಿಗೆ 5 ಜನ ಮಕ್ಕಳು, ಅದರಲ್ಲಿ 3 ಜನರ ಹೆಸರು ಗೊತ್ತಿಲ್ಲ. ಸದರಿ ಜ್ಞಾನದೇವ ರವರಿಗೆ 35 ವರ್ಷಗಳಿಂದ ಪಾರ್ಶವಾಯು ಹೊಡೆದಿತ್ತು ಹಾಗೂ ಅವರು ತೀರಿಕೊಂಡು 35 ವರ್ಷಗಳು ಆಗಿರುತ್ತದೆ.

ನಾನು 30 ವರ್ಷಗಳ ಹಿಂದಿನಿಂದಲೂ ಜ್ಞಾನದೇವ ರವರ ಹೆಂಡತಿ ಬಳಿ ಸೌದೆ ತೆಗೆದುಕೊಳ್ಳುತ್ತಿದ್ದೆನು. ಅವರ ಮರದ ವ್ಯಾಪಾರವನ್ನು ನಾನು ವಹಿಸಿಕೊಂಡಿರಲಿಲ್ಲ. "ಜ್ಞಾನದೇವ ರವರು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ನಡೆದಾಡಲು ಆಗುತ್ತಿರಲಿಲ್ಲ ಅವರು ನಡೆಸುತ್ತಿದ್ದ ಮರದ ವ್ಯಾಪಾರದಲ್ಲಿ ಹಾಗೂ ರಾಘವೇಂದ್ರ ಶಾ ಮಿಲ್ ನಲ್ಲಿ ನಾನು ತೊಡಗಿಸಿಕೊಂಡವನಾಗಿದ್ದೆ" ಎಂದು ಬರೆಸಿಲ್ಲ. ನನಗೆ 18 ವರ್ಷ ವಯಸ್ಸಿನವನು ಇದ್ದಾಗಲೆ ತಿಳುವಳಿಕೆ ಬಂದಿರುತ್ತದೆ. ರಾಘವೇಂದ್ರ ಶಾ ಮಿಲ್ ಚಕ್ಕುಬಂದಿ ನನಗೆ ಗೊತ್ತು. ರಾಘವೇಂದ್ರ ಶಾ ಮಿಲ್ ನ ಪೂರ್ವಕ್ಕೆ ಶಶಿಕಲಾ ರವರ ಖಾಲಿ ಸೈಟ್, ಸೈಟ್ ನಂಬರ್ ಗೊತ್ತಿಲ್ಲ. ಪಶ್ಚಿಮಕ್ಕೆ ವಿ.ಪಿ ಬೋರೆ ರೋಡ್, ಉತ್ತರಕ್ಕೆ ಐ.ಕೆ ಕಲ್ಯಾಣ ಮಂಟಪಕ್ಕೆ ಹೋಗುವ ರಸ್ತೆ, ಬೇರೆ ಯಾವುದೆ ಆಸ್ತಿ ಇರುವುದಿಲ್ಲ, ದಕ್ಷಿಣಕ್ಕೆ ರತ್ನಾಪುರಿ ರಸ್ತೆ ಇದೆ. ಸದರಿ ಚಕ್ಕುಬಂದಿಯ ಮಧ್ಯದಲ್ಲಿ 3 ಸೈಟ್ ಗಳು ಇವೆ, ಅಸೆಸ್ ಮೆಂಟ್ ನಂಬರ್ ನನಗೆ ಗೊತ್ತಿಲ್ಲ. ರಾಘವೇಂದ್ರ ಶಾ ಮಿಲ್ ನ ಅಸೆಸ್ ಮೆಂಟ್ ನಂಬರ್ ನನಗೆ ಗೊತ್ತಿಲ್ಲ. ಗೋಡೌನ್ ಇರುವ ಅಸೆಸ್ ಮೆಂಟ್ ನಂ. 11 ಆಗಿರುತ್ತದೆ.

ಈ ಕೇಸ್ ಪ್ರತಿವಾದಿಗಳು ಯಾರ್ಯಾರು ಎಂದು ನನಗೆ ಗೊತ್ತಿಲ್ಲ. 38 ವರ್ಷದಲ್ಲಿ ನಾನು ಸಾಕ್ಷಿ ಹೇಳುತ್ತಿರುವ ಆಸ್ತಿಗಳನ್ನು ಯಾರು ಯಾರಿಗೆ ಮಾರಾಟ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. 11,12,15 ಖಾಲಿ ಸೈಟ್ ಗಳು. 13 ನೇ ಸೈಟ್ ನಂಬರ್ ನಲ್ಲಿ ಶಾ ಮಿಲ್ ಇದೆ. ಸದರಿ 11,12,15 ನಂಬರ್ ನ ಸೈಟ್ ಗಳು ಯಾರಿಂದ ಯಾರಿಗೆ ಬಂತು ಎಂದು ನನಗೆ ಗೊತ್ತಿಲ್ಲ. ಈ ಕೇಸ್ ವಾದಿ ಯಾರೆಂದು ನನಗೆ ಗೊತ್ತಿಲ್ಲ. ಕಾರ್ತಿಕ್ ಎಂಬುವವರು ನನ್ನನ್ನು ನ್ಯಾಯಾಲಯಕ್ಕೆ ಕರೆದುಕೊಂಡು ಬಂದಿರುತ್ತಾರೆ. ಐ.ಕೆ ಕಲ್ಯಾಣ ಮಂಟಪಕ್ಕೆ ಹೋಗುವ ರಸ್ತೆಯ ಚಕ್ಕುಬಂದಿ ಹೇಳುತ್ತಿರಾ ಎಂದರೆ ಸಾಕ್ಷಿ ಪಶ್ಚಿಮಕ್ಕೆ ಜೀವನ್ ಕಾಲೇಜು ಎಂಬ ಮನೆ ಇದೆ ಎನ್ನುತ್ತಾರೆ. ಐ.ಕೆ ಕಲ್ಯಾಣ ಮಂಟಪದ ಚಕ್ಕುಬಂದಿ ನನಗೆ ಗೊತ್ತಿಲ್ಲ. ಕಾರ್ತಿಕ್ ಎಂಬುವವರು ಈ ದಿನ ನ್ಯಾಯಾಲಯಕ್ಕೆ ಬಂದಿರುತ್ತಾರೆ.

ನನ್ನ ಮನೆ ನಂಬರ್ 463 ಆಗಿರುತ್ತದೆ. ನಮ್ಮ ಮನೆಯ ಚಕ್ಕುಬಂದಿ ನನಗೆ ಗೊತ್ತಿಲ್ಲ. ನಾನು ಯಾವುದೆ ವ್ಯವಸಾಯವನ್ನು ಮಾಡುವುದಿಲ್ಲ, ಯಾವುದೆ ಶಾ ಮಿಲ್ ನ ವ್ಯವಹಾರ ವಹಿಸಿಕೊಂಡಿರಲಿಲ್ಲ, ಕಾರ್ತಿಕ್ ರವರ ಮಾತು ಕೇಳಿ ಆಮಿಷಕ್ಕೆ ಒಳಗಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರಮಾಣ ಪತ್ರದಲ್ಲಿ ಕಾಣಿಸಿರುವ ಆಸ್ತಿ ಯಾರಿಗೆ ಸೇರಿದ್ದು ಎಂದು ನನಗೆ ಗೊತ್ತಿಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಭಾಗ್ಯಮ್ಮ)

1 ನೇ ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್

ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.